> ನನ್ನ ಹೆಚ್ಚಿನ ಕತೆಗಳ ಪಾತ್ರಗಳು ನಮ್ಮ ಸುತ್ತಮುತ್ತ ಕಾಣುವಂತಹ ಮಧ್ಯಮ, ಕೆಳಮಧ್ಯಮವರ್ಗದ ಜೀವನದಿಂದ ನೇರವಾಗಿ ಎದ್ದು ಬಂದಂತವುಗಳು. ಕತೆ ಸಹಜತೆಯ ಚೌಕಟ್ಟನ್ನು ಮೀರದಂತೆ, ಪಾತ್ರಗಳು ನೆಲ ಬಿಟ್ಟು ಆಕಾಶಕ್ಕೆ ಜಿಗಿಯದಂತೆ ನಾನು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ



ಕತೆಯಲ್ಲಿ ಸೇರಿಕೊಂಡರೆ ಆಶ್ಚರ್ಯವಿಲ್ಲ. ಕತೆಗಾರಿಕೆಯಲ್ಲಿ ನಿರೂಪಣಾ ವಿಧಾನ ಅನ್ನುವುದು ಸನ್ನಿವೇಶಕ್ಕೆ ತಕ್ಕಂತೆ ರೂಪುಗೊಳ್ಳುತ್ತದೆ.

▸ **ನಿಮ್ಮ ಬರವಣಿಗೆಯಲ್ಲಿ ಪ್ರಜ್ಞಾಪೂರ್ವಕವಾಗಿ ಸ್ತ್ರೀವಾದವನ್ನು ತರದಿದ್ದರೂ, ಬರವಣಿಗೆಯುದ್ದಕ್ಕೂ ಸ್ತ್ರೀಪರ ಕಾಳಜಿ, ಅನುಕಂಪವಿದೆ; ಸಮಾಜ ಅವಳನ್ನು ನಡೆಸಿಕೊಳ್ಳುವ ರೀತಿಗೆ ಆಕ್ರೋಶ ಕಂಡುಬರುತ್ತದೆ. ಹೆಣ್ಣೇ ನಿಮ್ಮ ಬರವಣಿಗೆಯ ಕೇಂದ್ರ. ಆದರೂ ಹೆಣ್ಣು ವ್ಯವಸ್ಥೆಯನ್ನು ಇದ್ದಂತೆಯೇ ಒಪ್ಪಿಕೊಳ್ಳುತ್ತಾಳೆ. ಈ ಕುರಿತು ನಿಮ್ಮ ಅಭಿಪ್ರಾಯ...**

ಸ್ತ್ರೀಪರಕಾಳಜಿ, ಅನುಕಂಪ, ಸಮಾಜ ಅವಳನ್ನು ನಡೆಸಿಕೊಳ್ಳುವ ರೀತಿಗೆ ಆಕ್ರೋಶ ಮುಂತಾದವುಗಳು ಬಾಲ್ಯ ಕಾಲದಿಂದ ನಾನು ನೋಡಿಕೊಂಡು ಬೆಳೆದ ಸಮಾಜದ ನಡೆವಳಿಕೆಯಿಂದ ಉಂಟಾದ ಫಲಶ್ರುತಿ. ಸ್ತ್ರೀವಾದ ಅಥವಾ ಯಾವುದೇ ಇಸಂ ಅನ್ನು ಉದ್ದೇಶ ಪೂರ್ವಕವಾಗಿ ಕತೆ, ಕಾದಂಬರಿಗಳಲ್ಲಿ ತುರುಕುವುದು ನನ್ನ ಜಾಯಮಾನ ಅಲ್ಲ. ಸಮಾಜಕ್ಕೆ ಕನ್ನಡಿ ಹಿಡಿಯುವ ಕೆಲಸದಲ್ಲಿ ನನ್ನ ಅನುಭವದ ಮಿತಿಯಲ್ಲಿ ತೊಡಗಿಕೊಂಡಿರುವವಳು. ಹಿಂದೊಂದು ಕಾಲದಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲದ, ವಿಧವೆಯರಾದ ಹೆಣ್ಣುಮಕ್ಕಳು ಬದುಕಿನುದ್ದಕ್ಕೂ ಯಾವ ಪರಿಯ ನರಕವನ್ನು ಅನುಭವಿಸಿಕೊಂಡು ಬಂದರು, ಹೀಗಿದ್ದೂ ಹಣೆಬರಹದ ಹೆಸರಲ್ಲಿ ಅವುಗಳಿಗೆ ಹೇಗೆ ಒಗ್ಗಿ ಹೋಗಿದ್ದರು ಎನ್ನುವ ಕೆಲವಾದರೂ ಉದಾಹರಣೆಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ. ಸುಳ್ಳೇ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಪಾತ್ರಗಳನ್ನು ಸೃಜಿಸಿದರೆ ಅವು ನಮ್ಮ ಕಲ್ಪನೆಯನ್ನು ಆ ಪಾತ್ರಗಳಲ್ಲಿ ಆರೋಪಿಸಿದಂತಾಗಬಹುದೇ ವಿನಃ ವಾಸ್ತವತೆಗೆ ತದ್ವಿರುದ್ಧವಾಗಿರುತ್ತದೆ. ವಿದ್ಯೆ ಇಲ್ಲದೆ,